ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹಿಂದೆ ಚಿಕ್ಕಮಗಳೂರು ಕಾಲೇಜಿನ ಕಟ್ಟಡಕ್ಕೆ 100 ಟನ್ ಸಿಮೆಂಟ್ ಕೊಡಬೇಕೆಂದು ಸರ್ಕಾರದವರು ಶಿಫಾರಸ್ಸು ಮಾಡಿದ್ದರು. ಈಗ ಕಂಪೆನಿಯವರು 1,800 ರೂಪಾಯಿ ಜಾಸ್ತಿ ಕೊಡಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ಹಿಂದೆ ಇದ್ದ ರೇಟಿಗೆ ಸಿಮೆಂಟ್ ಕೊಡಬೇಕೆಂದು ಏತಕ್ಕೆ ಸರ್ಕಾರದವರು ಒತ್ತಾಯ ಹಾಕಬಾರದು ?

ಶ್ರೀ ಕೆ. ಮಲ್ಲಪ್ಪ.—ಹಿಂದೆ ಇದ್ದ ರೇಟಿಗಿಂತ ಈಗ ಎಂದರೆ 1-1-1966ರಿಂದ ಒಂದು ಮೂಟೆ ಸಿಮೆಂಟಿಗೆ 84 ನಯಾ ಪೈಸಾ ಜಾಸ್ತಿಯಾಗಿದೆ. ಆದ್ದರಿಂದ ಸಿಮೆಂಟನ್ನು ಸಪ್ಲೈ ಮಾಡುವಾಗ ಯಾವ ಬೆಲೆ ಇದೆಯೋ ಅದನ್ನು ಕೊಡಬೇಕಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸಿಮೆಂಟ್ ತಯಾರು ಮಾಡತಕ್ಕ ಕಂಪೆನಿಗಳವರು ನಿಷ್ಕಾಮಂತರಾಗಿ ಕಂಟ್ರೋಲ್ ರೇಟಿಗೆ ಸಿಮೆಂಟನ್ನು ಮಾರಾಟ ಮಾಡುತ್ತಿದ್ದಾರೆಯೇ ? ಸಿಮೆಂಟ್ ಹೋಲ್‌ಸೇಲ್ ಮಾಡತಕ್ಕವರು ಯಾರು ಇದ್ದಾರೆಯೋ ಅವರು ಇವೊತ್ತು ಜನಗಳಿಗೆ ಸಿಮೆಂಟನ್ನು ಹೆಚ್ಚಿನ ದರದಲ್ಲಿ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಹೆಚ್ಚಿನ ದರಕ್ಕೆ ಸಿಮೆಂಟನ್ನು ಮಾರಾಟಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಸಿಮೆಂಟಿನ ಹಂಚಿಕೆ ತೃಪ್ತಿಕರವಾಗಿ ನಡೆಯುತ್ತಿದೆ. ಬೆಲೆಗಳೂ ಸಹ ಹಿಡಿತದಲ್ಲಿವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸಿಮೆಂಟನ್ನು ಡೀ-ಕಂಟ್ರೋಲ್ ಮಾಡಿದಮೇಲೆ ಬೆಲೆ ಜಾಸ್ತಿಯಾಗಿದೆ. ಆದ್ದರಿಂದ ಈಗ ಹೆಚ್ಚಿಗೆ ಆಗಿರತಕ್ಕ ಸಿಮೆಂಟಿನ ಬೆಲೆಯನ್ನು ಸರಿ ಕಂಟ್ರಾಕ್ಟ್ದಾರರಿಗೆ ಸರ್ಕಾರದಿಂದ ಕೊಡಿಸಿಕೊಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಆ ವಿಚಾರವನ್ನು ಪಬ್ಲಿಕ್ ವರ್ಕ್ ಡಿಪಾರ್ಟ್‌ಮೆಂಟಿನವರನ್ನು ಕೇಳಬೇಕಾಗುತ್ತದೆ.

---

## Construction of New Hospital Buildings in Udipi.

*Q.—84. SRI B. BHASKAR SHETTY (Kaup).—

Will the Government be pleased to state :—

(*a*) when the Hospital Building Construction Committee deposited its share of public contribution towards the new Hospital building that is being constructed at Udipi.

(*b*) when the construction work of the new building was started.

(*c*) when they intend to shift the hospital from the old building to the new building.

*A.*—SRI K. NAGAPPA ALVA (Minister for Health).—

(*a*) Rs. 50,000 on 10-12-1960.
Rs. 5,000 on 9- 1-1961.
Rs. 45,105 on 10- 1-1961.

Rs. 1,00,105

(*b*) On 4th September 1961.

(*c*) During 1966-67.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಉಡುಪಿಯಲ್ಲಿ ನಿರ್ಮಿಸಲಾಗುತ್ತಿರುವ ಆಸ್ಪತ್ರೆಯ ಕಟ್ಟಡದ ಕೆಲಸ ನಿಧಾನವಾಗುವುದಕ್ಕೆ ಕಾರಣವೇನು ?

†ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿದೆ. ತುರ್ತು ಪರಿಸ್ಥಿತಿಯ ಕಾರಣ ಅದನ್ನು ಫಸ್ಟ್ ಸ್ಪೇಜ್, ಸೆಕೆಂಡ್ ಸ್ಪೇಜು ಎಂದು ಮಾಡಿ, ಫಸ್ಟ್ ಸ್ಪೇಜಿನಲ್ಲಿ ನಾವು ಕೆಲಸ ಮುಗಿಸುವಂತೆ ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಸಾಧಾರಣವಾಗಿ ಎರೆಡು ವರ್ಷಗಳಿಂದಲೂ ಆ ಕಟ್ಟಡದ ಕಂಟ್ರಾಕ್ಟ್ ದಾರರಿಗೆ ಕೊಡಬೇಕಾದ 80 ಸಾವಿರ ರೂಪಾಯಿಗಳನ್ನು ಕೊಡದೆ ಇರುವುದರಿಂದ ಅವರು ಕಟ್ಟಡವನ್ನು ಬಿಟ್ಟುಕೊಡದೆ ಇರುವುದು ಮತ್ತು ದುಡ್ಡಿನ ಕೊರತೆಯಿರುವುದು ಕಾರಣವಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೇನೂ ಇಲ್ಲ.

ಶ್ರೀ ಬಿ. ಬೈರಪ್ಪಾಜಿ.—ಆ ಆಸ್ಪತ್ರೆಯ ಕಟ್ಟಡಕ್ಕೆ ಎಸ್ಟಿಮೇಟ್ ಆಗಿದ್ದುದು ಎಷ್ಟು, ಈಗ ಅದರಲ್ಲಿ ಖರ್ಚಾಗಿರುವ ಹಣವೆಷ್ಟು ಮತ್ತು ಆ ಕಟ್ಟಡದ ಕಂಟ್ರಾಕ್ಟುದಾರನಿಗೆ ಕೊಡಬೇಕಾದ ಬಾಕಿ ಹಣ ಎಷ್ಟು ?

ಶ್ರೀ ಕೆ. ನಾಗಪ್ಪ ಆಳ್ವ.—ಅದರ ಎಸ್ಟಿಮೇಟು 13,80,500 ರೂಪಾಯಿಗಳು. ಈಗಾಗಲೇ ಆ ಕಟ್ಟಡಕ್ಕೆ 6 ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚಾಗಿದೆ. ಬಾಕಿ ಹಣವನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಸಂಜೀವನಾಥ ಐಕಲ.—ಈ ಆಸ್ಪತ್ರೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿದ ಮೇಲೆ ಹಳೆಯ ಆಸ್ಪತ್ರೆ ಬಿಲ್ಡಿಂಗ್ ಏನು ಮಾಡುತ್ತೀರಿ ?

MR. SPEAKER.—How does it arise out of this question?

SRI SANJEEVANATH AIKALA.—Because, on that account alone, the occupation of this new building is delayed.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಹಳೆಯ ಆಸ್ಪತ್ರೆಯು ಬಹಳ ಅವಶ್ಯಕವಿತ್ತು. ಅಲ್ಲಿ ಸ್ಥಳಾವಕಾಶ ಇಲ್ಲದೆ ಇದ್ದುದರಿಂದ ಹೊಸ ಆಸ್ಪತ್ರೆಗೆ ವರ್ಗಾಯಿಸುತ್ತಿದ್ದೇವೆ, ಅದನ್ನ ಖಂಡಿತವಾಗಿಯೂ 1966-67ನೇ ಸಾಲಿನಲ್ಲಿ ಹೊಸ ಆಸ್ಪತ್ರೆಗೆ ವರ್ಗಾಯಿಸುತ್ತೇವೆಂದು ಹೇಳಿದ್ದೀರಿ, ಯಾವ ದಿವಸ ಈ ಆಸ್ಪತ್ರೆಯನ್ನು ಸ್ಥಳಾಂತರ ಮಾಡುತ್ತೀರಿ ಎಂಬುದನ್ನಾದರೂ ಹೇಳುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಸಾಧಾರಣವಾಗಿ ಸ್ಥಳಾವಕಾಶ ಹಳೆಯ ಆಸ್ಪತ್ರೆಯಲ್ಲಿಯೂ ಇದೆ. ಆದರೆ ಆಸ್ಪತ್ರೆಯನ್ನು ಈಗ ಇದ್ದುದಕ್ಕಿಂತಲೂ ಸ್ವಲ್ಪ ದೊಡ್ಡದು ಮಾಡಬೇಕೆಂದು ಅದನ್ನು ಬೇರೆ ಕಡೆಗೆ ವರ್ಗಾಯಿಸುತ್ತಿದ್ದೇವೆ. ಇದನ್ನು ಈ ವರ್ಷದ ಅಂತ್ಯದಲ್ಲಿ ವರ್ಗಾಯಿಸುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಆ ಕಟ್ಟಡದ ಕೆಲಸವನ್ನು ಪೂರೈಸಲು ಕಾಲಮಿತಿಯನ್ನು ಗೊತ್ತುಮಾಡಿರಲಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಮಾಡಿದ್ದೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎಷ್ಟು ದಿವಸಗಳಲ್ಲಿ ಪೂರೈಸಬೇಕೆಂದು ಹೇಳಿದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ವರ್ಷದ ಆಖೈರಿನಲ್ಲಿ ಪೂರೈಸಬೇಕೆಂದು ಹೇಳಿದ್ದೇವೆ.

---

## Starting of Cement Factories

*Q.—124. SRI J. P. SARWESH (Serum).—

Will the Government be pleased to state :—

(*a*) the names of the districts along with the names of places and taluks in the State where the Cement Corporation of India is conducting Survey for starting of Cement Factories in the State ;

(*b*) the number of Cement Factories that are proposed to be started in the State in the coming four years ;

(*c*) the agencies which have come forward to start cement companies in the State ;

(*d*) the proposed production of each cement factory?